ವೃದ್ಧಾಶ್ರಮವಾಗುವುದು ತಪ್ಪುತ್ತದೆ, ರೈತನ ಬದುಕು ಹಸನಾಗುತ್ತದೆಂದು ಹೇಳುತ್ತಾ ಒಟ್ಟಾರೆಯಾಗಿ ವಿಶೇಷವಾದ ಕಾಳಜಿಯಿಂದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ಸಂಬಂಧಪಟ್ಟಂತೆ ಚರ್ಚೆಗೆ ಅವಕಾಶ ಮಾಡಿ ಕೊಟ್ಟಿರುವ ಮಾನ್ಯ ಅಧ್ಯಕ್ಷರಿಗೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ: ಜೈಹಿಂದ್.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ :

ವಿಷಯ : ಬೆಂಗಳೂರು ನಗರ ಹೊಸೂರು ರಸ್ತೆಯಲ್ಲಿರುವ ಚರ್ಚ್ ಮೇಲೆ ನಡೆದ ದಾಳಿ ಬಗ್ಗೆ :

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇವತ್ತು ಬೆಳಿಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ, ಫೋಟೋ ಕೂಡ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇರುವುದರಿಂದ, ಅವರು ಸದನಕ್ಕೆ ಬರಲಿ ಎಂದು ನಾನು ಕಾಯುತ್ತಿದ್ದೆ. ಮಾನ್ಯ ಸದಸ್ಯರು ಮಾತನಾಡುವುದಕ್ಕೆ ನಿಂತುಬಿಟ್ಟರು. ಹಾಗಾಗಿ ನಾನು ಸುಮ್ಮನಾದೆ. ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದು ಮಾನ್ಯ ಮುಖ್ಯಮಂತ್ರಿಗಳಿಂದ ನಾನು ಹೇಳಿಕೆಯನ್ನು ಬಯಸುತ್ತೇನೆ. ಹೊಸೂರು ರಸ್ತೆಯಲ್ಲಿ...

ಶ್ರೀ ಹೆಚ್.ಡಿ.ರೇವಣ್ಣ : ಪತ್ರಿಕೆಗಳಲ್ಲಿ ಈ ವಿಚಾರ ಬಂದಿದೆ, ಆದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಬಂದಿಲ್ಲವೆಂದು ಹೇಳಿರುವುದಕ್ಕೆ ವಿಚಾರ ಮಾಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ಈ ಹೊಸೂರು ರಸ್ತೆಯಲ್ಲಿ ಒಂದು ಚರ್ಚ್ ಮೇಲೆ ನಸುಕಿನ ವೇಳೆಯಲ್ಲಿ, ಬೆಳಗ್ಗೆ 3.00 ಗಂಟೆಯಲ್ಲಿ ದಾಳಿ ನಡೆದಿದೆ. ಯಾರೋ ಕೆಲವು ದುಷ್ಕರ್ಮಿಗಳು, ಸುಮಾರು 25 ಕ್ಕಿಂತ ಹೆಚ್ಚು ಜನರು ಆ ಚರ್ಚ್‌ನ ಕಿಟಕಿ ಬಾಗಿಲುಗಳನ್ನು ಮುರಿದು ಹಾಕಿ ಚರ್ಚ್ ಒಳಗಡೆ ನುಗ್ಗಿ, ಅಲ್ಲಿದ್ದಂತಹ ಇಬ್ಬರು ಕಾವಲುಗಾರರನ್ನು ಓಡಿಸಿದ್ದಾರೆ ಎಂದು as per the report in the newspaper, ಸಂಜೆವಾಣಿಯಲ್ಲಿ ಬಂದಿರತಕ್ಕಂಥದ್ದು. ಅಲ್ಲಿರತಕ್ಕಂಥ ಏಸು ಮೂರ್ತಿಯನ್ನು ಕಿತ್ತು ಹಾಕಿ, ಒಡೆದು ಹಾಕಿ, ಹೊರಗಡೆ ತಂದು ಎಸೆದಿದ್ದಾರೆ. ಎಲ್ಲಾ damage ಮಾಡಿ ಹೊರಗಡೆಯೆಲ್ಲಾ ಕೆಡವಿಬಿಟ್ಟಿದ್ದಾರೆ. ಅಲ್ಲಿ ಶಿಲುಬೆಯನ್ನು ವಿರೂಪಗೊಳಿಸಿದ್ದಾರೆ. ಮೇರಿ ವಿಗ್ರಹವನ್ನು ಕೂಡ ಕಿತ್ತು ಹಾಕಿದ್ದಾರೆ. ಈ ರೀತಿ ದುಷ್ಕರ್ಮಿಗಳು ಇದ್ದಕ್ಕಿದ್ದ

ಹಾಗೇ ಚರ್ಚ್‌ಗೆ ನುಗ್ಗುವುದು, ಅಲ್ಲಿರತಕ್ಕಂಥ ಶಿಲುಬೆಗಳನ್ನೆಲ್ಲ ಹಾಳು ಮಾಡುವುದು, ಒಡೆದು ಹಾಕುವುದು, ಬೀದಿಗೆ ತಂದು ಎಸೆಯುವುದು, ಈ ರೀತಿ ಮಾಡಿದರೆ ಅವರಿಗೆ ಭಯವಿಲ್ಲವೆಂದು ಕಾಣುತ್ತದೆ. ಇದರಿಂದ ಏನಾಗುತ್ತದೆಯೆಂದರೆ ಸಮಾಜದಲ್ಲಿ ಸಾಮರಸ್ಯ ಹಾಳಾಗುತ್ತದೆ. ಆ ದುಷ್ಕರ್ಮಿಗಳು ಯಾರೇ ಆಗಿರಲಿ, ಯಾವ ಗುಂಪಿಗೇ ಸೇರಿರಲಿ, ಯಾವ ಪಕ್ಷಕ್ಕಾದರೂ ಬೆಂಬಲ ಕೊಡಲಿ, ಅವರನ್ನು ಪತ್ತೆ ಹಚ್ಚಿ ಅವರಿಗೆ ಶಿಕ್ಷೆ ಕೊಡಬೇಕು. ಈ ರೀತಿ ಪದೇ ಪದೇ ಇಂತಹ ಘಟನೆಗಳು ನಡೆಯುವು ದರಿಂದ ಅಲ್ಪಸಂಖ್ಯಾತ ವರ್ಗದ ಜನ ಸಮಾಜದಲ್ಲಿ ಆತಂಕದಿಂದ ಇರುತ್ತಾರೆ. ಅವರು ಬಹಳ ಆತಂಕಕ್ಕೆ ಒಳಗಾಗುತ್ತಾರೆ. ಮಾನ್ಯ ಮುಖ್ಯಮಂತ್ರಿ ಗಳು ಬೆಳಿಗ್ಗೆಯಿಂದ ಸರ್ಕಾರದಿಂದ ಏನು action ತೆಗೆದುಕೊಂಡಿದ್ದಾರೆಂಬ ಬಗ್ಗೆ ಒಂದು statement ಮಾಡಬೇಕು. ಅವರು ಯಾರು? ಅವರನ್ನು arrest ಮಾಡಿದಿರಾ? ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ? ಅಲ್ಲಿ ರಕ್ಷಣೆ ಕೊಡುವ ವಿಚಾರದಲ್ಲಿ ಏನು ಮಾಡಿದ್ದಾರೆ? ಅಲ್ಲಿ ಜನರು ಮತ್ತು ಪಾದ್ರಿಗಳು ಪ್ರತಿಭಟನೆ ಮಾಡಿದ್ದಾರೆ. ಅದೂ ಕೂಡ ಪತ್ರಿಕೆಯಲ್ಲಿ ಬಂದಿದೆ. ಈ ರೀತಿ ಆದರೆ ಹೇಗೆ? ಅವರಿಗೆ ನಮ್ಮ ರಾಜ್ಯದಲ್ಲಿ ರಕ್ಷಣೆ ಇಲ್ಲವೆಂಬ ಭಾವನೆ ಬರುವುದಕ್ಕೆ ಪ್ರಾರಂಭವಾಗುತ್ತದೆ. Unfortunately, for BJP Government, ನೀವು ಬಂದ ಮೇಲೆ ಹೀಗೆ ಆಗುವುದು, ಇದು ಸರಿಯಿಲ್ಲ. ನಾನು ನೀವು ಮಾಡಿದ್ದೀರಿ ಎಂದು ಹೇಳುವುದಿಲ್ಲ. What is this? This is going on like this? ಇಲ್ಲಿ ಯಾರು ತಾನೇ ನೆಮ್ಮದಿಯಿಂದ ಇರುವುದಕ್ಕೆ ಸಾಧ್ಯವಾಗುತ್ತದೆ? ಪತ್ರಿಕೆಯವರು ಬೆಳಗ್ಗೆ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿದಾಗ ನೀವು ನನಗೇನೂ ಮಾಹಿತಿ ಇಲ್ಲ ಏನಾಗಿದೆ ಗೊತ್ತಿಲ್ಲ' ಎಂದು ನೀವು ಹೇಳಿಕೆ ಕೊಟ್ಟಿದ್ದೀರಿ. ಅದು ಪತ್ರಿಕೆಯಲ್ಲಿ ಬಹಳ ಸ್ಪಷ್ಟವಾಗಿ ಬಂದಿದೆ. ನಿಮಗೆ Intelligence ನವರು ಬೆಳಗ್ಗೆ ಏನು ನಡೆಯಿತು ಎಂದು ಹೇಳಿರಬೇಕು. ಇದು ಬೆಳಗ್ಗೆ 3.00 ಗಂಟೆಯಲ್ಲಿ ಆಗಿರುವುದು. ಬೆಳಗ್ಗೆ ಈ ರೀತಿ ಆದ ಮೇಲೆ ತಕ್ಷಣ Intelligence ನವರು ನಿಮಗೆ report ಕೊಟ್ಟಿರುತ್ತಾರೆ. Police Inteligence ನೇರವಾಗಿ ನಿಮ್ಮ ಅಧೀನದಲ್ಲೇ ಇರುತ್ತಾರೆ. ಅವರಾದರೂ ನಿಮಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದು ಹೇಳಬೇಕು. ನೀವು ಕೂಡಲೇ ಇದರ ಬಗ್ಗೆ ಏನು ಕ್ರಮ ತೆಗೆದು

ಕೊಂಡಿದ್ದೀರಿ? ಅವರು ಯಾರು? ಅವರ ಮೇಲೆ ಇಲ್ಲಿಯವರೆಗೂ ಏನು ಕ್ರಮ ತೆಗೆದುಕೊಂಡಿದ್ದೀರಿ? ಇದರ ಬಗ್ಗೆ ದಯಮಾಡಿ ಒಂದು statement ಕೊಡಬೇಕು. ಈ ರಾಜ್ಯದ ಅಲ್ಪಸಂಖ್ಯಾತ ಜನರಿಗೆ ಆತಂಕದಿಂದ ಇರಬೇಡಿ, ಸರ್ಕಾರ ಇವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಡುವಂತಹ ಕೆಲಸ ಮಾಡಬೇಕು. ತಾವು ದಯಮಾಡಿ ಆ statement ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಂದ ಬಯಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಈ ಘಟನೆ ಬೆಳಗಿನ ಜಾವ 3.00 ಗಂಟೆಯಲ್ಲಿ ಆಗಿರುವುದು. 25 ಜನ ಬೆಳಗಿನ ಜಾವ 3.00 ಗಂಟೆಯಲ್ಲಿ ಹೋಗಿ ಈ ಘಟನೆ ನಡೆದಿದ್ದರೂ ಕೂಡ ಈ ರಾಜ್ಯದಲ್ಲಿ Intelligence failure ಆಗಿದೆಯಾ ಎಂದು ಗೊತ್ತಿಲ್ಲ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಮಧ್ಯಾಹ್ನ ಪತ್ರಿಕೆಯವರು ಕೇಳಿದರೂ ಸಹ ಅವರು 'ನನಗೇನೂ ಗೊತ್ತಿಲ್ಲ, ಅದರ ಬಗ್ಗೆ ಮಾಹಿತಿ ಇಲ್ಲ' ಎಂದು ಹೇಳಿರುವುದನ್ನು ನೋಡಿದಾಗ Intelligence failure ಆಗಿದೆ ಎಂದು ಆಗುತ್ತದೆ. ಮಾನ್ಯ ರಾಜ್ಯಪಾಲರು ಒಂದು ಕಡೆ ಹೇಳಿರುವುದು ನಿಜವೆನ್ನುವ ಭಾವನೆ ಬರುತ್ತದೆ. ಅಲ್ಪಸಂಖ್ಯಾತರಿಗೆ ಈ ಸರ್ಕಾರದಲ್ಲಿ ರಕ್ಷಣೆಯಿಲ್ಲವೆನ್ನುವ ಭಾವನೆಯನ್ನು ಮಾನ್ಯ ರಾಜ್ಯಪಾಲರು ಈಗಾಗಲೇ ವ್ಯಕ್ತಪಡಿಸಿದ್ದಾರೆ. ಅದಕ್ಕೆ ಹಲವಾರು ಟೀಕೆ ಟಿಪ್ಪಣಿಗಳು ಬಂದಿವೆ. ಮಾನ್ಯ ರಾಜ್ಯಪಾಲರು ಈ ರೀತಿ ಹೇಳಿದರೆ ಅದಕ್ಕೂ ಟೀಕೆ ಟಿಪ್ಪಣಿಗಳೂ ಬರುತ್ತವೆ. ಈ ಘಟನೆ ನಡೆದಿರುವುದು ಬೆಳಗಿನ ಜಾವ 3.00 ಗಂಟೆಯಲ್ಲಿ 25 ಜನ ಹೋಗಿ ಚರ್ಚ್ ಮೇಲೆ ದಾಳಿ ನಡೆಸಿದ್ದಾರೆ. ದಿನ ಬೆಳಿಗ್ಗೆ 6.00 ಗಂಟೆಗೆ Intelligence ನವರು ಮಾನ್ಯ ಮುಖ್ಯಮಂತ್ರಿಯವರಿಗೆ ಈ ರಾಜ್ಯದಲ್ಲಿ ಏನೇನು ನಡೆಯುತ್ತಿದೆ ಎಂದು ವರದಿ ಕೊಡುತ್ತಾರೆ. ಅದು ಅವರ ಕರ್ತವ್ಯ. ಮಾನ್ಯ ಮುಖ್ಯಮಂತ್ರಿಗಳು "ಚರ್ಚ್ ದಾಳಿ ಬಗ್ಗೆ ನನಗೆ ಏನೂ ವರದಿ ಬಂದಿಲ್ಲ." ಎಂದರೆ ರಾಜ್ಯದಲ್ಲಿ Intelligence ಸಂಪೂರ್ಣವಾಗಿ ಕುಸಿದು ಹೋಗಿದೆ, ಅಥವಾ ಪೊಲೀಸ್ ಇಲಾಖೆಯೇ ಕುಸಿದಿದೆಯೇ ಎನ್ನುವುದು ಗೊತ್ತಿಲ್ಲ. ಈ ಘಟನೆ ನಡೆದಿರುವುದು ಪತ್ರಿಕೆಯ ಮುಖಪುಟದಲ್ಲಿ ಬರುತ್ತದೆ. ಇದಕ್ಕೆ ಗೃಹ ಸಚಿವರು ಕಾರಣಕರ್ತರೋ? ಯಾರು ಕಾರಣಕರ್ತರು? ಇವತ್ತು ಗೃಹ ಸಚಿವರು failure ಆಗಿದ್ದಾರೆಂದು ಕಾಣುತ್ತದೆ. ಈ ದಾಳಿ ನಡೆಸಿದವರು ಯಾರೇ ಇರಲಿ ಸಮಗ್ರವಾಗಿ ಅವರ ಮೇಲೆ ಕ್ರಮ

ತೆಗೆದುಕೊಳ್ಳಬೇಕು. ಯಾವ ಪಕ್ಷದವರು ಎಂದು ನೋಡುವುದಕ್ಕೆ ಹೋಗಬೇಡಿ. ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಈ ಸರ್ಕಾರಕ್ಕೆ ಕೆಟ್ಟ ಹೆಸರು ತರಬೇಕೆನ್ನುವಂತಹ ವ್ಯವಸ್ಥಿತವಾದಂತಹ ಪಿತೂರಿ, ಷಡ್ಯಂತರ ನಡೆಯುತ್ತಿರುವುದನ್ನು ನಾನು ಅನೇಕ ದಿವಸಗಳಿಂದ ಗಮನಿಸುತ್ತಿದ್ದೇನೆ. ನಾನು ಚೈನಾ ದೇಶಕ್ಕೆ ಹೋಗುವುದಕ್ಕಿಂತ ಮುಂಚೆ ಕಂಟೋನ್ಮೆಂಟ್ ಏರಿಯಾದಲ್ಲಿ ಕ್ರಿಶ್ಚಿಯನ್ ಸಮುದಾಯದ ಒಂದು ದೊಡ್ಡ ಸಮಾರಂಭದಲ್ಲಿ ನಾನು ಭಾಗವಹಿಸಿ, ಅಲ್ಲಿ ಸೇರಿದಂತಹ ಸಾವಿರಾರು ಜನರನ್ನು ಕುರಿತು ಅಡ್ರೆಸ್ ಮಾಡಿ, ಮಾತನಾಡಿ, ಯಾವರೀತಿಯಾಗಿ ಈ ಸರ್ಕಾರ ಹಿಂದೂ, ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸೌಹಾರ್ದತೆಯನ್ನು ಕಾಪಾಡಿಕೊಂಡು ಹೋಗುವಂತಹ ರೀತಿಯಲ್ಲಿ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿರಬೇಕಾದರೆ, ಈ ವಾತಾವರಣವನ್ನು ಕದಡುವಂತಹ ಷಡ್ಯಂತರ ನಡೆಯುತ್ತಿರುವಂತಹ ಮಾತಿಗೆ ಕಿವಿಗೊಡಬೇಡಿ, ನಾವೆಲ್ಲ ಒಟ್ಟಾಗಿ ಇರೋಣ ಎನ್ನುವ ಮಾತನ್ನು ಅಲ್ಲಿ ಹೇಳಿ ಬಂದಿದ್ದೇನೆ. ಮಾನ್ಯ ಪ್ರತಿಪಕ್ಷದ ಮುಖಂಡರುಗಳಾದ ಸಿದ್ದರಾಮಯ್ಯ ಮತ್ತು ರೇವಣ್ಣನವರು ಹೇಳುತ್ತಿರುವಂಥದ್ದು ಗಂಭೀರವಾದಂತಹ ವಿಷಯ ಇದು. ಯಾವ ಸಮಾಜ ಘಾತುಕ ಶಕ್ತಿಗಳು ಈ ಒಂದು ವಾತಾವರಣವನ್ನು ಕದಡುವಂತಹ ವ್ಯವಸ್ಥಿತವಾದಂತಹ ಪಿತೂರಿಗಳಲ್ಲಿ ತೊಡಗಿದ್ದಾರೆ, ಸರ್ಕಾರಕ್ಕೆ ಕೆಟ್ಟ ಹೆಸರು ತರುವಂತಹ ಪ್ರಯತ್ನ ಮಾಡುತ್ತಿದ್ದಾರೆ, ಅವರು ಯಾರೇ ಇರಬಹುದು, ನಾನು ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಈ ರೀತಿಯ ಘಟನೆಗಳು ಮರುಕಳಿಸದಂತೆ ನಾನು ಎಚ್ಚರ ವಹಿಸುತ್ತೇನೆ. Intelligence ಬಿಗಿ ಇದೆ. ಅವರು ಹಗಲು ರಾತ್ರಿ ಕೆಲಸ ಮಾಡುತ್ತಿದ್ದಾರೆ. ಅನೇಕ ಘಟನಾವಳಿಗಳಲ್ಲಿ ಬಾಂಬ್ ಸ್ಫೋಟದಿಂದ ಹಿಡಿದು ಅವರನ್ನು ಹಿಡಿದಿದ್ದೇವೆ. ಬೇರೆ ಬೇರೆ ರಾಜ್ಯಗಳಿಗೆ ಹೋಗಿ ಅವರ ಬಗ್ಗೆ ಕ್ರಮಗಳನ್ನು ತೆಗೆದುಕೊಂಡಿರುವಂತಹ ಈ ಸಂದರ್ಭದಲ್ಲಿ, ಮಂಗಳೂರಿನಲ್ಲಿ 4–5 ಕಡೆ ಸರಣಿ ಘಟನೆಗಳು ನಡೆದು ಏನು ಆಘಾತ ಉಂಟಾಗುವಂತಹ ವಾತಾವರಣ ಸೃಷ್ಟಿಯಾಗಿತ್ತೋ, ಆ ರೀತಿಯ ವ್ಯವಸ್ಥೆ ಆಗುತ್ತಿದೆ ಎಂದು ನನಗೆ ಅನಿಸುತ್ತದೆ. ನಾನು ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ನನಗೆ ಇನ್ನೂ ನಿಖರವಾದ ಮಾಹಿತಿಗಳು ಸಿಕ್ಕಿಲ್ಲ. ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಈ ಬಗ್ಗೆ ನಾಳೆ

ನಾನು ಬಂದಾಗ ಒಂದು ಸ್ಪಷ್ಟವಾದಂತಹ ಹೇಳಿಕೆಯನ್ನು ಮಾಡುವವ ನಿದ್ದೇನೆ. ಅದು ಯಾವುದೇ ಶಕ್ತಿಯಿರಲಿ, ಯಾವುದೇ ಮುಲಾಜಿಲ್ಲದೆ, ಅವರಿಗೆ ಯಾವುದೇ ರೀತಿಯ ಬೆಂಬಲವಿರಲಿ, ಅದನ್ನು ಬಗ್ಗು ಬಡಿಯುತ್ತೇವೆ ಎನ್ನುವ ಭರವಸೆಯನ್ನು ಈ ಮನೆಯಲ್ಲಿ ನಾನು ನಿಮಗೆ ಕೊಡುತ್ತೇನೆ. ನಾನು ನಾಳೆ ವಿವರವಾದ Statement ಅನ್ನು ನಿಮಗೆ ಮಾಡುತ್ತೇನೆ. ನಾನು ಇದರ ಬಗ್ಗೆ ಈ ಮನೆಗೆ ಆಶ್ವಾಸನೆಯನ್ನು ಕೊಡುತ್ತೇನೆ. ನನ್ನ ಕ್ರಿಶ್ಚಿಯನ್ ಬಂಧುಗಳಿಗೆ, ಮೈನಾರಿಟಿ ಬಂಧುಗಳಿಗೂ ಸಹ ನಾನು ಭರವಸೆ ಕೊಡುತ್ತೇನೆ. ಸರ್ಕಾರ ನಿಮ್ಮ ಜೊತೆಗೆ ಇದೆ. ಇದರ ಬಗ್ಗೆ ಯಾವುದೇ ರೀತಿಯ ಆತಂಕಗೊಳ್ಳುವ ಅಗತ್ಯವಿಲ್ಲ. ಇವರಿಗೆ ಸರಿಯಾದ ಶಿಕ್ಷೆ ಕೊಡುವುದಕ್ಕೆ ಸರ್ಕಾರ ಸಿದ್ಧವಿದೆ ಎನ್ನುವಂತಹ ಭರವಸೆಯನ್ನು ನಾನು ಈ ನಾಡಿನ ಜನತೆಗೆ ಕೊಡುತ್ತೇನೆ. ಕೋಮು ಸೌಹಾರ್ದತೆಯನ್ನು ಕಾಪಾಡುವಂಥದ್ದು ನಮ್ಮ ಸರ್ಕಾರದ ಮೊದಲನೇ ಆದ್ಯತೆ. ಈ ವಾತಾವರಣವನ್ನು ಕೆದಕುವಂತಹ, ಕೆಡಿಸುವಂತಹ ಈ ದುಷ್ಟ ಶಕ್ತಿಗಳನ್ನು ನಾವೂ ನೀವೆಲ್ಲಾ ಒಟ್ಟಾಗಿ ಸೇರಿ ದಮನ ಮಾಡೋಣ. ಅದಕ್ಕೆ ಸರ್ಕಾರ ಸಿದ್ಧವಿದೆ, ಅದರ ಬಗ್ಗೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

4. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಮುಂದುವರೆದ ಚರ್ಚೆ :

ಶ್ರೀ ಸಿ.ಎಸ್.ಅಪ್ಪಾಜಿ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆ ಗಳನ್ನರ್ಪಿಸುತ್ತೇನೆ. ತಾವು ಇವತ್ತು ಬಹಳ ಮುಖ್ಯವಾದ ವಿಷಯವಾಗಿರುವ ಗ್ರಾಮೀಣಾಭಿವೃದ್ಧಿ ಮತ್ತು ಕೃಷಿಗೆ ಸಂಬಂಧಪಟ್ಟಂತೆ ಚರ್ಚೆ ಮಾಡುವು ದಕ್ಕಾಗಿ ಮುಂದುವರೆದಂಥ ಅಧಿವೇಶನವನ್ನು ಕರೆದಿದ್ದೀರಿ. ಇದು ಬಹಳ ಜಟಿಲ ಹಾಗೂ ಕಷ್ಟವಾಗಿರುವ ವಿಷಯವಾಗಿದೆ. ಇದು ನಿನ್ನೆ ಮೊನ್ನೆಯಿಂದ ಇರುವ ವಿಚಾರವಲ್ಲ. ಸ್ವಾತಂತ್ರ್ಯ ದೊರೆತ ನಂತರ ಹಲವಾರು ರೀತಿಯ ಸುಧಾರಣೆಗಳನ್ನು ತರುವುದಕ್ಕೆ ಕೇಂದ್ರ ಸರ್ಕಾರ, ವಿಶೇಷವಾಗಿ ಅದು ಕಾಂಗ್ರೆಸ್ ಸರ್ಕಾರವಾಗಿರಬಹುದು, ಅದರ ನಂತರದ ಸರ್ಕಾರಗಳಾಗಿರ ಬಹುದು, ರೈತರ ಸಮಸ್ಯೆಗೆ ಮತ್ತು ಗ್ರಾಮೀಣಾಭಿವೃದ್ಧಿಯ ವಿಷಯವಾಗಿ ಸತತವಾಗಿ ಹಲವಾರು ಪ್ರಯತ್ನಗಳನ್ನು ಮಾಡುತ್ತಾ ಬಂದಿದ್ದೇವೆ. ಈ